made on the eve of the elections ? I have said, Yes. ಕನ್ನಡದಲ್ಲಿ ಕೇಳಿರುವ ಪ್ರಶ್ನೆಗೆ ಚುನಾವಣೆಗೋಸ್ಕರ ನಾಮನಿರ್ದೇಶನ ಮಾಡಲಾಗಿದೆಯೇ ಎಂದು ಇರುವುದಕ್ಕೆ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೆಯಯಲ್ಲಿ ಏನೆಂದು ಇದೆ 'ಈ ನಾಮ ನಿರ್ದೇಶನಗಳನ್ನು ಚುನಾವಣೆಯ ಸಮಯದಲ್ಲಿ ಮಾಡಲಾಗಿದೆಯೆಂಬುದು ನಿಜವೇ ? ಎಂದು ಇದೆ ಅದಕ್ಕೆ ತಾವು 'ಹೌದು' ಎಂದು ಉತ್ತರ ಕೊಟ್ಟಿದ್ದೀರಿ.

ಶ್ರೀ ಹೆಚ್. ವಿಶ್ವನಾಥಯ್ಯ.—ತಾವು ಉತ್ತರದಲ್ಲಿರುವ ಪ್ರಶ್ನೆಯನ್ನು ತೆಗೆದುಕೊಳ್ಳಿ ಬೇಡಿ. ಪ್ರಿಂಟ್ ಆಗಿರುವುದನ್ನು ನೋಡಿ, ನಾನು ಕೊಟ್ಟಿರುವುದು ಸರಿಯಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸರ್ಕಾರದಿಂದ ಹಣ ರಿಲೀಸ್ ಆಗಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ.—೯೫ ಲಕ್ಷ ರೂಪಾಯಿಗಳನ್ನು ಈಗಾಗಲೇ ರಿಲೀಸ್ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಹಣವನ್ನು ರಿಲೀಸ್ ಮಾಡದೆ can they acquire power to nominate four persons ?

ಶ್ರೀ ಹೆಚ್. ವಿಶ್ವನಾಥಯ್ಯ.—ನಾಮನಿರ್ದೇಶನ ಮಾಡಿರುವ ಬಗ್ಗೆ ಪ್ರಶ್ನೆ ಮಾಡುವುದಾದರೆ ಅದಕ್ಕೆ ಬೇರೆ ಜಾಗ ಇದೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಸೆಕ್ಷನ್ ೫೩(ಎ) ಪ್ರಕಾರ ಸರ್ಕಾರಕ್ಕೆ ಅಧಿಕಾರವಿದೆಯೆಂದು ಭಾವಿಸಿ ನಾಮಕರಣ ಮಾಡಿದ್ದೇವೆ.

ಅರ್ಚಕರಿಗೆ ನೀಡಂವ ತಸ್ಕೀಕ್ ಹಣವನ್ನು ಹೆಚ್ಚಿಸುವುದು

೮೯೯ (೨೧೬೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ ಮಾರಾಕಟ್ಟೆ ಮತ್ತು ಖುಷ್ಕಿ ಭೂ ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಮತ್ತು ಅರ್ಚಕರ ಸಂಖ್ಯೆ ಎಷ್ಟು ?

ಆ) ಆ ಪೈಕಿ ಅರ್ಚಕರಾಗಿ ಹಕ್ಕುಪತ್ರ ಪಡೆದಿರುವ ಮತ್ತು ಕೊಡಬೇಕಾಗಿರುವ ಅರ್ಚಕರುಗಳ ಸಂಖ್ಯೆ ಎಷ್ಟು ?

ಇ) ಸದರಿ ಅರ್ಚಕರಿಗೆ ಕೊಡಲಾಗುತ್ತಿರುವ ತಸ್ಕೀಕ್ ಎಷ್ಟು ಮತ್ತು ಬಾಕಿಯಾಗಿರುವ ತಸ್ಕೀಕ್ ಎಷ್ಟು ?

ಈ) ಅರ್ಚಕರಿಗೂ ಕೊಡಲಾಗುತ್ತಿರುವ ತಸ್ಕೀಕ್ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ದತ್ತಿ ರಾಜ್ಯ ಸಚಿವರು).—

ಅ) ದೇವಸ್ಥಾನಗಳ ಸಂಖ್ಯೆ. ೩೩೦೪೪
ಅರ್ಚಕರ ಸಂಖ್ಯೆ. ೨೪೭೬೪

ಆ) ಹಕ್ಕುಪತ್ರಗಳನ್ನು ದೇವಸ್ಥಾನಗಳ ಹೆಸರಿಗೆ ಕೊಡಲಾಗುವುದೇ ಹೊರತು ಅರ್ಚಕರಿಗೆ ಕೊಡಲಾಗುವುದಿಲ್ಲ

ಕೊಟ್ಟಿರುವುದು — ೨೫೫೯೧
ಬಾಕಿ ೪೮೯೫

ಇ) ತಸ್ಕೀಕ್ ಭತ್ಯೆಯನ್ನು ದೇವಸ್ಥಾನಗಳಿಗೆ ನೀಡಲಾಗುವುದೇ ಹೊರತು ಅರ್ಚಕರಿಗೆ ನೀಡುವುದಿಲ್ಲ.

ಈ) 'ಇ' ನಲ್ಲಿ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) – ,, –

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯಮಂತ್ರಿಗಳು ದೇವಾಲಯಗಳ ಸಂಖ್ಯೆಯನ್ನು ಕೊಟ್ಟಿದ್ದಾರೆ. ನಾನು ಇಲ್ಲ ಒಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ದೇವಾಲಯಗಳಲ್ಲಿ ಗಂಡುದೇವರ ದೇವಾಲಯಗಳ ಸಂಖ್ಯೆ ಎಷ್ಟು, ಹೆಣ್ಣುದೇವರ ದೇವಾಲಯಗಳ ಸಂಖ್ಯೆ ಎಷ್ಟು ? ಹೆಣ್ಣುದೇವರು ಅಂದರೆ ಮಾರಮ್ಮ, ಪುಸಣಿಮ್ಮ ಇತ್ಯಾದಿ ಇರುತ್ತವೆ, ಇಂತಹ ದೇವರುಗಳು ಎಷ್ಟು ? ಆ ದೇವರುಗಳ ಅರ್ಚಕರ ಸಂಖ್ಯೆ ಎಷ್ಟು ? ಅರ್ಚಕರುಗಳ ಸಂಖ್ಯೆಯಲ್ಲಿ ಯಾವ್ಯಾವ ಜಾತಿಗೆ ಸೇರಿದವರು ಇದ್ದಾರೆ ? ಷೆಡ್ಯುಲ್ ಕಾಸ್ಟ್, ಷೆಡ್ಯುಲ್ ಟ್ರೈಬ್ ಹಾಗೂ ಹಿಂದುಳಿದ ವರ್ಗಗಳವರ ಸಂಖ್ಯೆ ಎಷ್ಟು ? ೪೯೫ ಜನಗಳಿಗೆ ಹಕ್ಕುಪತ್ರ ಕೊಟ್ಟಿಲ್ಲವೆಂದು ಹೇಳಿದ್ದೀರಿ, ಅವರಿಗೆ ಯಾವಾಗ ಹಕ್ಕುಪತ್ರಗಳನ್ನು ಕೊಡುತ್ತೀರಿ ?

ಶ್ರೀ ಕೆ. ಅಮರನಾಥಶೆಟ್ಟಿ.—ಗಂಡುದೇವರು ಹಾಗೂ ಹೆಣ್ಣು ದೇವರುಗಳ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಅದೇರೀತಿ ಅರ್ಚಕರ ಜಾತಿಯ ಬಗ್ಗೆ ಕೇಳಿದ್ದಾರೆ ಅದಕ್ಕೂ ಸಹ ಬೇರೆ ಪ್ರಶ್ನೆ ಕೇಳಿದರೆ ಯಾವ್ಯಾವ ಜಾತಿಯವರು ಇದ್ದಾರೆಂದು ಉತ್ತರ ಕೊಡುತ್ತೇನೆ. ೪೯೫ ಜನರಿಗೆ ತಸ್ತೀಕ್ ಹಕ್ಕುಪತ್ರವನ್ನು ಮೂರ ತಿಂಗಳಿನಲ್ಲಿ ಕೊಡುತ್ತೇನೆಂದು ಮೊನ್ನೆ ಉತ್ತರ ಕೊಟ್ಟಿದ್ದೇನೆ, ಅದನ್ನು ಮೂರು ತಿಂಗಳೊಳಗೆ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಒಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಎರಡನೇ ಸಾರಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ವೆಂಟರಾಮಯ್ಯ.—ಒಂದೇ ಒಂದು ಪ್ರಶ್ನೆ ಕೇಳುತ್ತೇನೆ, ತಸ್ತೀಕ್ ಹಕ್ಕುಪತ್ರವನ್ನು ಮೂರು ತಿಂಗಳೊಳಗೆ ಕೊಡುತ್ತೇನೆಂದು ಹೇಳಿದ್ದೀರಿ. ಅದರಿಂದಲೇ ಪೂಜಾರಿಗಳಿಗೆ ಸಂಬಳ ಕೊಡುವುದು. ನಾನು ಸ್ಪಷ್ಟವಾಗಿ ಕೇಳುತ್ತೇನೆ. ೫೦ ಪೈಸೆ ಒಂದು ತಿಂಗಳಿಗೆ ಕೊಡುವ ಅರ್ಚಕರು ಇದ್ದಾರೆ. ಅವರ ಗತಿ ನಮಗೆ ಗೊತ್ತು. ದುರ್ದೈವದಿಂದ ಪಿಳ್ಳೆ ಜುಟ್ಟುಬಿಟ್ಟುಕೊಂಡು ಗಲಾಟೆ ಬಾರಿಸಿ ಕೊಂಡು ಇರುತ್ತಾರೆ. ಅವರಿಗೆ ತಿಂಗಳಿಗೆ ೫೦ ಪೈಸೆ ಏನು ಕೊಡುತ್ತೀರಿ, ಇದನ್ನು ನಂಬಿಕೊಂಡಂಥ ವರಿಗೆ ಮಿನಿಮಮ್ ವೇಜಸ್ ಕೊಡುವುದಕ್ಕೆ ಏನಾದರೂ ಕಾನೂನು ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜನ ಎಂ. ಖರ್ಗೆ—ಇವರಿಗೂ ಅದಕ್ಕೂ ಏನು ಸಂಬಂಧ ? ನಿಮ್ಮ ಐಡಿಯಾಲಜಿಗೆ ನಾಳೆ ನಿಮ್ಮನ್ನು ಜನ ಸಂಶಯದ ದೃಷ್ಟಿಯಿಂದ ನೋಡುತ್ತಾರೆ.

ಅಧ್ಯಕ್ಷರು.—ಶ್ರೀ ವೆಂಕಟರಾಮಯ್ಯನವರೇ, ನೀವು ಕುಳಿತುಕೊಳ್ಳಿ. ಕೋರ್ಟಿನಲ್ಲಿ ನೀವು ಹೇಗೆ ವಕೀಲಿ ಮಾಡುತ್ತೀರೋ ಗೊತ್ತಿಲ್ಲ. ಹೀಗೆ ಸಿಕ್ಕಾಪಟ್ಟೆ ಕ್ರಾಸ್‌ಎಕ್ಸಾಮಿನ್ ಮಾಡುತ್ತೀರೇನು ?

ಶ್ರೀ ಆರ್. ವೆಂಕಟರಾಮಯ್ಯ.—ಈ ಆಗಮ ಪಾಂಡಿತ್ಯ ಏನಿದೆ, ಪರಿಶಿಷ್ಟ ಜಾತಿ ಮತ್ತು ವರ್ಗದವರು ಇದನ್ನು ಕಲಿತು ಇವರನ್ನು ಈ ದೊಡ್ಡದೊಡ್ಡ ದೇವಸ್ಥಾನಗಳಿಗೆ ಫುಲ್‌ಅಪ್ ಮಾಡಿದರೆ ಈಗೇನು ಬಹಿಷ್ಕಾರ ಹಾಕಿದ್ದಾರಲ್ಲಾ, ಹರಿಜನರು ಅಲ್ಲಿ ಹೋಗಬಾರದು ಎಂದು. ಇದು ಹೋಗುವುದಿಲ್ಲವೇ ? ಇದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಕೆ. ಅಮರನಾಥಶೆಟ್ಟಿ.—ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜನತೆ ಯಾರು ಬೇಕಾದರೂ ಆಗಮ ಶಾಸ್ತ್ರದಲ್ಲಿ ಕಲಿಯುವುದಕ್ಕೆ ಅವಕಾಶ ಇದೆ. ಯಾರಿಗೂ ತಡೆ ಮಾಡಿಲ್ಲ. ಯಾರು ಬೇಕಾದರೂ ಕಲಿತು ಬರಬಹುದು.

ಕುಂದಗೋಳ್ ತಾಲ್ಲೂಕಿನಲ್ಲಿ ಅಂಗನವಾಡಿಗಳನ್ನು ತೆರೆಯುವ ಬಗ್ಗೆ

೯೦೨ (೨೬೦೦) ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದಗೋಳ್ ತಾಲ್ಲೂಕಿನಲ್ಲಿ ಅಂಗನವಾಡಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?